ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು

C.C. No.1063/2024

ದಿನಾಂಕಃ**01.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ ಜಿ ಪಿ ಎಸ್ ವಕೀಲರಿಂದಃ-

ಏಕಾಂತ್ ಶೆಟ್ಟಿ ರವರು ನನ್ನ ಗಂಡನ ಕಡೆಯಿಂದ ನನಗೆ ಪರಿಚಯ. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ಆರೋಪಿಗೆ ಹಣವನ್ನು ನಾನು ನನ್ನ ತಂದೆಯ ಮನೆಯಲ್ಲಿ ನೀಡಿರುತ್ತೇನೆ. ಹಣ ಪಡೆಯುವಾಗ ಆರೋಪಿ, ಏಕಾಂತ್ ಶೆಟ್ಟಿ ರವರು ಬಂದಿದ್ದರು. ಸಾಲ ಪಡೆದಾಗ ನಾನು ಮತ್ತು ನನ್ನ ಮಕ್ಕಳು ಇದ್ದೆವು. ಕುಟುಂಬದ ಹಣಕಾಸಿನ ವ್ಯವಹಾರವನ್ನು ನಾನು ಮತ್ತು ನನ್ನ ಗಂಡ ಮಾಡುತ್ತೇವೆ. ನಮ್ಮ ವಾರ್ಷಿಕ ಆದಾಯ ಸುಮಾರು ರೂ.3 ಲಕ್ಷಕ್ಕು ಅಧಿಕವಾಗಿದೆ. ನಾನು ಆದಾಯ ತೆರಿಗೆ ಪಾವತಿದಾರಳು ಎಂದರೆ ಸರಿಯಲ್ಲ. ಆರೋಪಿಯ ಸ್ನೇಹಿತರಾದ ಏಕಾಂತ್ ಶೆಟ್ಟಿ ರವರು ಹಣ ಬೇಕು ಎಂದು ಹೇಳಿದ್ದರಿಂದ ನಾನು ನನ್ನ ಬ್ಯಾಂಕ್ ಖಾತೆ ಯಿಂದ ಹಣ ಡ್ರಾ ಮಾಡಿ ತಂದು ಇಟ್ಟಿದ್ದೆ ಎಂದರೆ ಸರಿ.

ಆರೋಪಿ ಸರ್ಕಾರಿ ನೌಕರರಾಗಿರುವ ಕಾರಣ ಹಾಗೂ ಕೃಷಿ ಜಮೀನು ಇದ್ದು ಅವರಿಗೆ ಸಾಕಷ್ಟು ಆದಾಯವಿರುವುದರಿಂದ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಸಾಲ ನೀಡಿದ ದಿನದಂದೇ ಚೆಕ್ ಪಡೆದುಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ನಾನು ಕೇಳಲಿಲ್ಲ ಎನ್ನುತ್ತಾರೆ. ಚೆಕ್ ಅನ್ನು ಹಾಜರುಪಡಿಸುವ ಮುನ್ನ ಆರೋಪಿಗೆ ಮಾಹಿತಿ ನೀಡಿಲ್ಲ. ನಿಪಿ 1 ರ ಒಕ್ಕಣೆಯನ್ನು ಏಕಾಂತ್ ಶೆಟ್ಟಿ ರವರು ಬರೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿಯೇ ಬರೆದಿದ್ದಾರೆ ಎನ್ನುತ್ತಾರೆ. ಬ್ಯಾಂಕಿನಿಂದ ಹಿಂಬರಹ ಬಂದ ನಂತರ ಆರೋಪಿ ಅಥಾವ ಏಕಾಂತ್ ಶೆಟ್ಟಿ ರವರನ್ನು ನಾನು ವಿಚಾರಿಸಿಲ್ಲ.

ಆರೋಪಿಯು ಚೆಕ್ ನೀಡಿ ಮೋಸಮಾಡಿದ್ದಾರೆ ಎಂದು ಯಾವುದೇ ಪೊಲೀಸ್ ದೂರು ದಾಖಲಿಸಿಲ್ಲ, ಸಾಕ್ಷಿ ಮುಂದುವರೆದು ನೇರವಾಗಿ ಈ ಕೇಸನ್ನು ದಾಖಲಿಸಿದ್ದೇವೆ ಎನ್ನುತ್ತಾರೆ. ಆರೋಪಿಗೆ ನಾನು ಸಾಲ ನೀಡಿದ್ದೆ ಎನ್ನುವ ದಿನದಂದೇ ನನ್ನ ಖಾತೆಯಿಂದ ಪ್ರಪುಲ್ಲ ಮತ್ತು ಶಿಲ್ಪ ಎಂಬುವವರ ಖಾತೆಗೆ ತಾಲಾ ರೂ.1 ಲಕ್ಷ NEFT ಆಗಿದೆ ಎಂದರೆ ಸರಿ, ಸದರಿಯವರು ನನ್ನ ಸಹೋದರಿಯರು ಎನ್ನುತ್ತಾರೆ. ಆರೋಪಿಗೆ ಸಾಲ ನೀಡಿದ ದಿನದಂದು ನನ್ನ ಖಾತೆಯಲ್ಲ

ಕೇವಲ 1 ಲಕ್ಷ ಇತ್ತು ಎಂದರೆ ಸಾಕ್ಷಿಯು ನಾನು ಆ ಮೊದಲೇ ಹಣ ಡ್ರಾ ಮಾಡಿ ತಂದಿದ್ದೆ ಎನ್ನುತ್ತಾರೆ. ನಿಪಿ 6 ರ ಸ್ಟೇಟ್ ಮೆಂಟ್ ನಲ್ಲಿ ಆರೋಪಿಗೆ ಸಾಲ ನೀಡಿದ ಹಿಂದಿನ 15 ದಿನಗಳ ಹಿಂದೆ ಯಾವುದೇ ದೊಡ್ಡ ಮೊತ್ತ ಡ್ರಾ ಆಗಿಲ್ಲ ಎಂದರೆ ಸಾಕ್ಷಿಯು ನಿರ್ದಿಷ್ಟವಾಗಿ 15 ದಿನ ಅಲ್ಲ ಎನ್ನುತ್ತಾರೆ. ನಿಪಿ 6 ರಲ್ಲಿ 5 ಲಕ್ಷ ಡ್ರಾ ಆದ ಯಾವುದೇ ನಮೂದು ಇಲ್ಲ ಎಂದರೆ ಸಾಕ್ಷಿಯು ನಾನು ಒಮ್ಮೆಲೆ ಬಿಡಿಸಿಲ್ಲ ಎನ್ನುತ್ತಾರೆ.

ಆರೋಪಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಗಿರಿಜಮ್ಮ ಎಂಬುವವರ ಪರಿಚಯ ನನಗೆ ಇಲ್ಲ. ಸದರಿ ಗಿರಿಜಮ್ಮ ರವರ ಮಗ ರೋಹಿತ್ ಕೂಡ ಪರಿಚಯವಿಲ್ಲ. ನಾನು ನನ್ನ ಕುಟುಂಬದ ಅವಶ್ಯಕತೆಗಾಗಿ ಮತ್ತು ವೈಯಕ್ತಿಕ ಖರ್ಚಿಗಾಗಿಹಿ ಆರೋಪಿಯ ತಾಯಿ ಗಿರಿಜಮ್ಮ ರವರಿಂದ ರೂ.9,50,000/- ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರ ಪರಿಚಯ ನನಗೆ ಇಲ್ಲ ಎನ್ನುತ್ತಾರೆ. ಆರೋಪಿಯು ತಾಯಿಯು ಜಮೀನು ಕ್ರಯದ ಕರಾರು ಮಾಡಿಕೊಂಡಿದ್ದ ಬಾಬ್ತು ಹಣವನ್ನು ಕೇಳಿದಾಗ ವಾಪಾಸು ಕೊಡುವುದಾಗಿ ಹೇಳಿ ನಾನು ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ.

ಪ್ರಸ್ತುತ ಪ್ರಕರಣವಲ್ಲದೆ ನನ್ನ ವಿರುದ್ಧ ಯಾವುದೇ ಚೆಕ್ ಕೇಸು ಬಾಕಿ ಇಲ್ಲ. ಆರೋಪಿಯ ತಾಯಿಯು ಸದರಿ ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ ನನ್ನ ಖಾತೆಯ ಚೆಕ್ ಸಂಖ್ಯೆ 029291 ರ ದಿಃ11.03.2024 ಎಂದು ನಮೂದಿಸಿರುವ ಚೆಕ್ ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಚೆಕ್ ಬೌನ್ಸ್ ಆಗಿ ಆ ಸಂಬಂಧ ಆರೋಪಿಯ ತಾಯಿಯು ಚಿಕ್ಕಮಗಳೂರಿನ ನ್ಯಾಯಾಲಯದಲ್ಲಿ ಚೆಕ್ ಅಮಾನ್ಯ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ವಿರುದ್ದವೇ ಚೆಕ್ ಅಮಾನ್ಯ ಪ್ರಕರಣ ಇರುವುದರಿಂದ ಹಾಗೂ ನಾನೇ ಸಾಲಗಾರಳಾಗಿರುವುದರಿಂದ ನನಗೆ ಆರೋಪಿಗೆ ಸಾಲ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ವಿವಾದಿತ ವ್ಯವಹಾರವು ನನ್ನ ಮತ್ತು ಏಕಾಂತ್ ಶೆಟ್ಟಿ ರವರ ನಡುವಿನ ವ್ಯವಹಾರವಾಗಿದ್ದು, ಸದರಿ ವ್ಯವಹಾರಕ್ಕು ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಒಕ್ಕಣೆ ಮತ್ತು ಅದರಲ್ಲಿನ ಸಹಿಯ ಕೈಬರಹದ ನಡುವೆ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಆರೋಪಿಯೇ ಬರೆದಿದ್ದಾರೆ ಎನ್ನುತ್ತಾರೆ. ನಿಪಿ

1 ರ ಒಕ್ಕಣೆ ಮತ್ತು ಸಹಿಯ ಶಾಹಿಯು ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ ನಿಪಿ 1 ಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಮೋಸಮಾಡಬೇಕೆಂಬ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯಲು ವಿಕಾಂತ್ ಶೆಟ್ಟಿ ರವರು ನೀಡಿದ ನಿಪಿ 1 ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ನೇರವಾಗಿ ಎಂದಿಗೂ ಸಹಃ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನ್ಯಾಯಾಲಯದಲ್ಲಿ ಹೊರತು ಪಡಿಸಿ ನಿಮ್ಮನ್ನು ಬೇರೆ ಎಲ್ಲಿಯೂ ನೋಡಿಲ್ಲವೆಂದರೆ ಸರಿಯಲ್ಲ, ಹಣ ಪಡೆದುಕೊಳ್ಳುವಾಗ ಬಂದಿದ್ದರು ಎನ್ನುತ್ತಾರೆ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರವಾಗಿಲ್ಲದಿದ್ದರು ಅವರಿಗೆ ಮೋಸ ಮಾಡಲು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ3 ರಲ್ಲಿನ ಸಹಿಯು ನನ್ನದು. ನನ್ನ ಪ್ರಮಾಣ ಪತ್ರ ಮತ್ತು ದೂರಿನಲ್ಲಿನ ಸಹಿಯು ನನ್ನದು. ನಿಪಿ 3 ರಲ್ಲಿನ ನನ್ನ ಸಹಿ ಮತ್ತು ದೂರು ಹಾಗೂ ನನ್ನ ಪ್ರಮಾಣ ಪತ್ರದಲ್ಲಿನ ನನ್ನ ಸಹಿಗಳ ನಡುವೆ ವ್ಯತ್ಯಾಸ ಇದೆ ಎಂದರೆ ಸರಿ.

<u>ಮರು ವಿಚಾರಣೆಃ-</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.